## ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪೊನ್ನಂಪೇಟೆ

**ಸಿ.ಸಿ. ನಂ. 529/2025** **ಪ್ರಾ.ಸಾ –1**
**ಚಾ.ಸಾ – 1**

ದಿನಾಂಕಃ **06.01.2026** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಸಾಕ್ಷಿಯ ಹೆಸರು | : | ವಾಣಿ |
| ಗಂಡನ ಹೆಸರು | : | ರಮೇಶ |
| ವಯಸ್ಸು | : | 50 ವರ್ಷ |
| ಉದ್ಯೋಗ | : | ಗೃಹಿಣಿ |
| ವಾಸ ಸ್ಥಳ | : | ನೆಮ್ಮಲೆ ಗ್ರಾಮ |

ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-

ಚಾಸಾ 2 ನನ್ನ ಗಂಡ. ಆರೋಪಿತರು ನಮ್ಮ ಸಂಬಂಧಿಕರು. ದಿ. 21.01.2025 ರಂದು ಇಟಾಚಿ ವಾಹನವನ್ನು ನಮ್ಮ ರಸ್ತೆ ಕಡೆ ತರಬೇಡಿ ಎಂದು ಹೇಳಿದ್ದಕ್ಕೆ ಆರೋಪಿಗಳು ನನ್ನ ಗಂಡನಿಗೆ ಕೈ ಯಲ್ಲಿ ದೇಹಕ್ಕೆ ಹೊಡೆದರು. ಅವರನ್ನು ಸಾಯಿಸಿಬಿಡುತ್ತೇನೆ. ಬೋಳಿ ಮಗನೆ ಎಂದು ಆರೋಪಿಗಳು ಬೆದರಿಸಿರುತ್ತಾರೆ. ಅದನ್ನು ನಾನು ನಿಲ್ಲಿಸಲು ಹೋದಾಗ ನನ್ನ ಬಟ್ಟೆಯನ್ನು ಹರಿದುಹಾಕಿರುತ್ತಾನೆ. ಅಷ್ಟರಲ್ಲಿ ಚಾಸಾ 3 ರವರು ಸ್ಥಳಕ್ಕೆ ಬಂದಾಗ ಆರೋಪಿತರು ಹೊರಟು ಹೋಗಿರುತ್ತಾರೆ. ನಂತರ ಹೋಗಿ ದೂರನ್ನು ಶ್ರೀಮಂಗಲ ಪೊ. ಠಾಣೆಯಲ್ಲಿ ಕೊಟ್ಟು ಸುಮಾರು 11 ರಿಂದ 12.30 ಗಂಟೆ ವರೆಗೂ ಮಹಜರ್ ಮಾಡಿರುತ್ತಾರೆ.

ಸಾಕ್ಷಿಯು ದೂರು, ಮಹಜರ್ ಅನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿ ಪಿ 1 ಮತ್ತು 2 ಎಂದು, ಸಹಿಗಳನ್ನು ನಿ ಪಿ 1(ಎ) ಮತ್ತು 2(ಎ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯು ತನ್ನ ಹೇಳಿಕೆಗೆ ಭಾಗಶಃ ಪ್ರತಿಕೂಲವಾಗಿ ಸಾಕ್ಷ್ಯ ನುಡಿಯುತ್ತಿರುವುದರಿಂದ, ಮಾನ್ಯ ಎಪಿಪಿರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ನೀಡಲಾಯಿತು)

ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-

ಮಹಜರ್ ವೇಳೆ ಪೊಲೀಸರು ನನ್ನ ಟಾಪ್ ಅನ್ನು ಅಮಾನತುಪಡಿಸಿಕೊಂಡರು. ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು ಅದನ್ನು ಮು. ಮಾ 1 ಎಂದು ಗುರುತಿಸಲಾಯಿತು. 1 ನೇ ಆರೋಪಿ ನನ್ನ ಚೂಡಿದಾರ್ ಟಾಪ್ ಅನ್ನು ಹಿಡಿದು ಎಳೆದಾಡಿ ಮುಂದೆ ಹರಿದು ಹೋಗಿದ್ದು ನನ್ನ ಮಾನಕ್ಕೆ ಕುಂದುಂಟು ಮಾಡಿರುತ್ತಾರೆ ಎಂದರೆ ಸರಿ. ಮಹಜರ್ ಸಮಯದಲ್ಲಿ ಫೋಟೋ ತೆಗೆದರು ಎಂದರೆ ಸರಿ. ಸಾಕ್ಷಿಯು ಆ ಫೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿ ಪಿ 3 ಮತ್ತು 4 ಎಂದು ಗುರುತಿಸಲಾಯಿತು. ಆರೋಪಿತರು ನಮ್ಮನ್ನು ತಡೆದು ಗಲಾಟೆ ಮಾಡಿದರು ಎಂದರೆ ಸರಿ. ಆರೋಪಿತರು ನನ್ನ ಗಂಡನನ್ನು ಕುರಿತು ನಾಯಿ ಸೂಳೆ ಮನಗೆ ಎಂದು ಬೈದರು ಎಂದರೆ ಸರಿ. ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲುಃ ಆರೋಪಿ ಪರ ಶ್ರೀ.ಸಿ. ಪಿ. ಪಿ. ವಕೀಲರಿಂದಃ

ನಾನು 7 ನೇ ತರಗತಿವರೆಗೂ ಓದಿದ್ದೇನೆ. ನಾನು ಹೇಳಿದಂತೆ ದೂರನ್ನು ನನ್ನ ಗಂಡ ಬರೆದ. ನಾನು ನನ್ನ ಗಂಡ ದೂರು ಕೊಡಲು ಹೋದೆವು. ನಾನು ಆರೋಪಿಗಳು ಒಂದೇ ಕುಟುಂಬದವರು ಎಂದರೆ ಸರಿ. ನನ್ನ ಮದುವೆ ಆದಾಗಿನಿಂದಲೂ ಅದೇ ಗ್ರಾಮದಲ್ಲಿ ವಾಸವಿದ್ದೇವೆ. 2 ನೇ ಆರೋಪಿ ಮನೆ ನನ್ನ ಮನೆಯ ಪಕ್ಕ ಎಂದರೆ ಸರಿ. ಸಂಜು 2 ನೇ ಆರೋಪಿ ಸುಮಾರು ವರ್ಷಗಳಿಂದ ವಾಸವಿದ್ದಾರೆ. 1 ನೇ ಆರೋಪಿ ತೋಟಕ್ಕೆ ಹೋಗಲು ನನ್ನ ಮನೆಯೇ ಮುಂದೆ ಹೋಗಬೇಕು ಎಂದರೆ ಸರಿ. ಆರೋಪಿಗಳ ಟ್ರ್ಯಾಕ್ಟರ್ ಅವರ ತೋಟಕ್ಕೆ ಹೋಗಲು ನಮ್ಮ ಮನೆಯ ಮುಂದಿರುವ ರಸ್ತೆಯಿಂದಲೇ ಹಾದುಹೋಗಬೇಕು ಎಂದರೆ ಸರಿ. ನಮಗೆ ಒಬ್ಬ ಗಂಡು ಮಗ. ಆರೋಪಿತರು ಅವಿವಾಹಿತರು. ನಮ್ಮ ಮನೆಯ ಮುಂದಿರುವ ದಾರಿ ನಮ್ಮದು ಎಂದು ಹೇಳಿ ಅವರ ವಾಹನವನ್ನು ಹೋಗಲು ಬಿಟ್ಟಿರುವುದಿಲ್ಲ. ಆ ಜಾಗವು ನಮ್ಮದು ಎಂದು ತೋರಿಸಲು ದಾಖಲೆ ದೋಷರೋಪಣಾ ಪಟ್ಟಿಯಲ್ಲಿ ಇಲ್ಲ. ಆ ದಾರಿ ಸತೀಶ್ ಅಂದರೆ ನನ್ನ ಗಂಡ ಚಿಕ್ಕಪ್ಪನ ಮಗನ ಹೆಸರಿನಲ್ಲಿದೆ.

ಚೊಟ್ಟೆಯಂಡ ಮಾಡ ಕುಟುಂಬಸ್ಥರೆಲ್ಲರೂ ಇದೇ ದಾರಿಯಲ್ಲಿ ಓಡಾಡುತ್ತಾರೆ ಎಂದರೆ ಸರಿಯಲ್ಲ. 4 ವರ್ಷದ ಹಿಂದೆ ಈ ರಸ್ತೆ ಆಗಿರುತ್ತದೆ. ಸತೀಶ್ ರವರು ನಮ್ಮ ಅನುಕೂಲಕ್ಕೆ ಓಡಾಡಲು ಆ ದಾರಿ ಮಾಡಿಕೊಟ್ಟಿರುತ್ತಾರೆ. ಈ ರಸ್ತೆ ಸರ್ಕಾರದ ರಸ್ತೆ, 2017 ರಲ್ಲಿ ಗ್ರಾಮ ಪಂಚಾಯಿತಿಯವರು ರಸ್ತೆ ನಿರ್ಮಾಣಿಸಿರುತ್ತಾರೆ ಎಂದರೆ ನನ್ನ ಗಂಡನನ್ನು ಕೇಳಬೇಕು. ಈ ರಸ್ತೆ ಕಾಮಗಾರಿ 2 ನೇ ಆರೋಪಿ ವಹಿಸಿದ್ದ ಎಂದರೆ ಸರಿಯಲ್ಲ. 2 ನೇ ಆರೋಪಿ ಅವರಿಂದ ಈ ರಸ್ತೆ ನಿರ್ಮಾಣವಾಗಿರುತ್ತದೆ ಎಂದರೆ ಸರಿಯಲ್ಲ. ಜೆ. ಸಿ. ಬಿ. ಯಾವುದು ಎಂದು ನನಗೆ ಗುರುತು ಹಿಡಿಯಲು ಆಗುವುದಿಲ್ಲ. ಗಲಾಟೆ ಆದಾಗ ಜೆ. ಸಿ. ಬಿ. ವಾಹನದ ಚಾಲಕ ಇದ್ದ, ಅವರು ಸಾಕ್ಷಿ ಆಗಿರುವುದಿಲ್ಲ. ಈ ರಸ್ತೆ ಸಾರ್ವಜನಿಕರ ರಸ್ತೆ ಎಂದರೆ ಸರಿಯಲ್ಲ. 2 ನೇ ಆರೋಪಿ ಮನೆ ಬಿಟ್ಟರೆ ಇತರೇ ಮನೆಗಳು ಹತ್ತಿರದಲ್ಲಿಲ್ಲ. ಈ ಪ್ರಕರಣಕ್ಕಿಂತಲೂ ಮೊದಲು ದಾರಿ ವಿಚಾರದಲ್ಲಿ ಗಲಾಟೆ ಆಗಿಲ್ಲ.

ಮು. ಮಾ 1 merron ಬಣ್ಣದ್ದು ನೇರಳೆ ಬಣ್ಣದ್ದಲ್ಲ, ನ್ಯಾಯಾಲಯದಲ್ಲಿ ಅದರ ಬಣ್ಣ ನೋಡಿ merron ಬಣ್ಣದಾಗಿರುತ್ತದೆ. ಮು ಮಾ 1 ಯಾವ ಕಂಪನಿದು ಎಂದು ಗೊತ್ತಿಲ್ಲ. ಮು ಮಾ tericot ಆಗಿರುತ್ತದೆ. ಮು ಮಾ 1 ಪಾಲಿಸ್ಟರ್ ಬಟ್ಟೆ ಎಂದರೆ ಸರಿಯಲ್ಲ. ನನ್ನ ಗಂಡ ಕೆಳಗಡೆ ಬಿದ್ದ ನಂತರ ಬಟ್ಟೆ ಹರಿದಿರುತ್ತದೆ. ಮೊದಲು ದೂರು ಕೊಟ್ಟು ನಂತರ ಆಸ್ಪತ್ರೆಗೆ ಹೋದೆವು ಎಂದರೆ ಸರಿ. ಫೋಟೋಗಳಲ್ಲಿ ಜೆ. ಸಿ ಬಿ ಓಡಾಡಿರುವ ಗುರುತು ಇಲ್ಲ. ನಿ ಪಿ 4 ಫೋಟೋದಲ್ಲಿ ಮು ಮಾ ನೇರಳೆ ಬಣ್ಣದಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ. ಫೋಟೋದಲ್ಲಿ ಟಾಪ್ ಹರಿದಿರುವುದು ಕಾಣಿಸುತ್ತಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೆಂದು ಮು ಮಾ 1 ಅನ್ನು ಹರಿದು ಪೊಲೀಸರಿಗೆ ಕೊಟ್ಟಿರುತ್ತೇನೆ ಆರೋಪಿ ಹರಿದಿರುವುದಿಲ್ಲ ಎಂದರೆ ಸರಿಯಲ್ಲ.

ನಾನು ಮತ್ತು ನನ್ನ ಗಂಡ ರಸ್ತೆ ವಿಚಾರಕ್ಕೆ ಮೊದಲಿನಿಂದಲೂ ಆರೋಪಿಗಳ ಮೇಲೆ ಗಲಾಟೆ ಮಾಡುತ್ತಿದ್ದು ಈ ಬಗ್ಗೆ ಅವರುಗಳು ನಮ್ಮ ವಿರುದ್ಧ ಪಂಚಾಯಿತಿಯಲ್ಲಿ ದೂರು ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನಾನು ಆರೋಪಿಸಿದಂತೆ ಆರೋಪಿ ನನ್ನ ಮಾನಕ್ಕೆ ದಕ್ಕೆ

ಉಂಟು ಮಾಡಿಲ್ಲ, ನನಗೆ ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ, ಅಕ್ರಮ ತಡೆ ಉಂಟು ಮಾಡಿರುವುದಿಲ್ಲ ಎಂ ದರೆ ಸರಿಯಲ್ಲ. ಆರೋಪಿಗಳ ಆಸ್ತಿಗಳ ಬಗ್ಗೆ ನನಗೆ ಗೊತ್ತಿಲ್ಲ. ಸುಮಾರು 8 ಎಕರೆ ಇಬ್ಬರಿಗೂ ಇರಬಹುದು. ಆರೋಪಿತರು ಅವಿವಾಹಿತರಾದ ಕಾರಣ ಅವರ ಆಸ್ತಿಗಳನ್ನು ಹೊಡೆದುಕೊಳ್ಳಲು ಸುಳ್ಳು ದೂರು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಈ ರಸ್ತೆಯು ಎಲ್ಲ ಕುಟುಂಬಸ್ಥರಿಗೆ ಸೇರಿದ ಸಾರ್ವಜನಿಕರ ರಸ್ತೆ ಎಂದರೆ ಸರಿಯಲ್ಲ. ಮೇಲೆ ಹೇಳಿದ ಸಾಕ್ಷ್ಯವೆಲ್ಲ ಸುಳ್ಳು ಎಂದರೆ ಸರಿಯಲ್ಲ. ಫೋಟೋಗಳು ಸೃಷ್ಟಿತ ದಾಖಲೆಗಳು ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)**

Sd/-
ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಪೊನ್ನಂಪೇಟೆ